ನಮ್ಮ ಸಮುದಾಯದವರ ಮದುವೆಯೊಂದರಲ್ಲಿ ಪರಿಚಯವಾದದ್ದು. ಪರಿಚಯವಾದ ದಿನವೇ ಹೈದರಾಬಾದಿನ ಬಂಜಾರ ಹಿಲ್ಸ್‌ನಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಹೋಗಿ ಅತ್ಯಂತ ಆದರದ ಆತಿಥ್ಯ ನೀಡಿ ಅಂದೇ ಏಕವಚನದಲ್ಲಿ ಸಂಬೋಧಿಸಿಯೂ ಬಿಟ್ಟಿದ್ದ.

ಯಾವುದೇ ವರ್ಗದ ತನ್ನ ವಾರಿಗೆಯವರನ್ನಲ್ಲದೆ ತನಗಿಂತಲೂ ದೊಡ್ಡವರನ್ನೂ ರಾಘವರೆಡ್ಡಿ ಏಕವಚನದಲ್ಲಿ ಮಾತನಾಡಿ ಮುಜುಗರಕ್ಕೀಡು ಮಾಡುತ್ತಾನೆ ಒಮ್ಮೊಮ್ಮೆ. ಅದು ಬೇಕಾಗಿ ಮಾಡುವುದಲ್ಲದೆ ಆತನ ಕ್ಯಾರೆಕ್ಟರ್‌ನಲ್ಲಿಯೇ ಬಿಲ್ಟ್ ಆಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಜಮೀನುದಾರನಾದ ಅವರ ತಾತ ತಿರುಗಿ ಬಿದ್ದು ಬ್ರಿಟಿಷ್ ಕಲೆಕ್ಟರೊಬ್ಬನನ್ನು ಖೂನಿ ಮಾಡಿ ಹತ್ತು ವರ್ಷಗಳ ಕಾಲ ಜೈಲುವಾಸ ಅನುಭವಿಸಿ, ಸ್ವಾತಂತ್ರ್ಯ ಬಂದ ನಂತರ ಬಿಡುಗಡೆಯಾಗಿ ರಾಜಕೀಯದಲ್ಲೂ ನೆಲೆ ಕಂಡುಕೊಂಡರಂತೆ. ಯಾರ ಬಳಿಯೇ ಆಗಲಿ ಪರಿಚಯ ಮಾಡಿಕೊಂಡ ತಕ್ಷಣವೇ ತಮ್ಮದು ಫ್ರೀಡಂ ಫೈಟರ್ಸ್ ಫ್ಯಾಮಿಲಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಸದ್ಯಕ್ಕೆ ಇವನ ಅಣ್ಣ ಕಾಕಿಗಡ್ಡ ಸತ್ಯನಾರಾಯಣಡು ಸಿಟ್ಟಿಂಗ್ ಎಂಪಿಯಾಗಿದ್ದು ರಾಘವರೆಡ್ಡಿ ಹಳ್ಳಿಯ ನೂರಾರು ಎಕರೆಗಳ ಕೃಷಿಯ ಜೊತೆಗೆ ಹೈದರಾಬಾದಿನಲ್ಲಿ ದೊಡ್ಡ ಕಟ್ಟಡ ನಿರ್ಮಾಣ ಕಂಪನಿಯನ್ನು ಹೊಂದಿದ್ದಾನೆ. 'ರೆಡ್ ಐ' ಎಂಬ ಟ್ರಸ್ಟ್ ಸ್ಥಾಪಿಸಿ ಸಮಾಜ ಸೇವೆಗೆಂದು ಪ್ರತಿವರ್ಷ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾನೆ. ಮನಿ ಲಾಂಡ್ರಿಂಗ್ ಕೇಸಿನಲ್ಲಿ ಒಮ್ಮೆ ಈ ಟ್ರಸ್ಟ್ ಸಿಕ್ಕಿಬಿದ್ದು ಇಡಿ ಇಲಾಖೆಗೆ ಸಾಬೀತು ಮಾಡಲು ಸರಿಯಾದ ಸಾಕ್ಷ್ಯಾಧಾರಗಳಿಲ್ಲದೆ ಟ್ರಸ್ಟ್ ಬಚಾವಾಗಿತ್ತು. ಅದರ ಹಿಂದೆ ಕೆಲಸ ಮಾಡಿದ್ದಿದ್ದು ರಾಘವರೆಡ್ಡಿಯ ಬ್ರೈನೇ. ಅಣ್ಣನ ರಾಜಕೀಯ ಒಡನಾಟದಿಂದಾಗಿ ಕೆಲವು ರಾಜ್ಯಗಳ ರಾಜಕೀಯ ನಾಯಕರ ಪರಿಚಯ ಹೊಂದಿರುವುದಲ್ಲದೆ ಕಷ್ಟದಲ್ಲಿರುವ ಸ್ನೇಹಿತರಿಗೆ ಸಹಾಯ ಮಾಡಲು ಸದಾ ಒಂದು ಹೆಜ್ಜೆ ಮುಂದಿರುತ್ತಾನೆ. ಯಾವ ಇಲಾಖೆಯ ಎಂಥಾ ಖಡಕ್ ಅಧಿಕಾರಿಗಳನ್ನಾದರೂ ಧೈರ್ಯದಿಂದ ಮಾತನಾಡಿ ಗೆಳೆತನ ಬೆಳೆಸಿಬಿಡುತ್ತಾನೆ. ಬೇಡ ಬೇಡವೆಂದರೂ ಆತನ 'ರೆಡಿ ಟು ಈಟ್' ಆಹಾರ ಕಂಪನಿಯಲ್ಲಿ ನನ್ನನ್ನು ಪಾಲುದಾರನನ್ನಾಗಿ ಮಾಡಿಕೊಂಡು ತಿಂಗಳಿಗೆ ಕನಿಷ್ಠ ಎರಡು ಲಕ್ಷಗಳವರೆಗೂ ಲಾಭಾಂಶವನ್ನು ನನ್ನ ಅಕೌಂಟ್‌ಗೆ ಸಂದಾಯ ಮಾಡುತ್ತಿದ್ದಾನೆ. ಬೆಂಗಳೂರಿನಲ್ಲಿ ಮಾರ್ಕೆಟಿಂಗ್, ರಿಟರ್ನ್ಸ್ ಫೈಲಿಂಗ್, ತೆರಿಗೆ ಪಾವತಿ ಮುಂತಾದ ಉಸ್ತುವಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ರಾಘವರೆಡ್ಡಿ ಯಾವುದಾದರೊಂದು ಕೆಲಸ ಹಿಡಿದು ದಿಲ್ಲಿ, ಹೈದರಾಬಾದ್ ನಡುವೆ ವಾರದಲ್ಲಿ ಎರಡು ಮೂರು ಬಾರಿಯಾದರೂ ತಿರುಗಾಡುತ್ತಿರುತ್ತಾನೆ.

ಇವನ ಒಂದು ವಿಶಿಷ್ಟವಾದ ವಿದ್ಯೆಯೆಂದರೆ ತನಗೆ ಬೇಕಾದಾಗ ತಕ್ಷಣ ನಿದ್ರೆಗೆ ಜಾರಿ ತನಗೆ ಬೇಕಾದ ಇಂತಿಷ್ಟೇ ಟೈಮಿಗೆ ಸರಿಯಾಗಿ ಒಂದೇ ಒಂದು ಸೆಕೆಂಡ್ ವ್ಯತ್ಯಾಸವಿಲ್ಲದೆ ಎಚ್ಚರಗೊಳ್ಳುವುದು! ಇದನ್ನು ಹಿಮಾಲಯದಲ್ಲಿ ಗುರುವೊಬ್ಬರಿಂದ ಆರು ತಿಂಗಳ ಕಾಲ ಕಲಿತು ಬಂದಿದ್ದಾಗಿ ಹೇಳುತ್ತಾನೆ. ಸದ್ಯಕ್ಕೆ ಎರ್ನಾಕುಲಂನ ಖ್ಯಾತ ರಾಜಕಾರಣಿ ಮತ್ತು ಕೇರಳದ ಅತ್ಯಂತ ದೊಡ್ಡ ರಬ್ಬರ್ ಉದ್ಯಮಿ ಕಾರ್ಲ್ ಮಾರ್ಕ್ಸ್ ನಯ್ಯಾರ್ ಉರುಫ್ ಕೆ.ಎಮ್. ನಯ್ಯಾರರ ಯಾವುದೋ ಚಿಕ್ಕ ಸಮಸ್ಯೆಯನ್ನು ಬಗೆಹರಿಸಲು ನನ್ನನ್ನೂ ಬರುವಂತೆ ಹೇಳಿದ್ದ. ನಾನು ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವುದರಿಂದ ರಾಘವ ರೆಡ್ಡಿ ಕೆಲವೊಮ್ಮೆ ನನ್ನನ್ನು ಟ್ರಾನ್ಸ್‌ಲೇಟರ್ ಆಗಿಯೂ ಬಳಸಿಕೊಳ್ಳುವುದುಂಟು. ಅದನ್ನು ದುರುಪಯೋಗವೆಂದು ನಾನಂತೂ ಭಾವಿಸಿಲ್ಲ. ಏಕೆಂದರೆ ಪರಿಚಯವಾದ ಐದು ವರ್ಷಗಳಲ್ಲಿ ನನಗೆ ತಿಳಿದಂತೆ ರಾಘವರೆಡ್ಡಿ ಯಾವತ್ತೂ ಹದ್ದುಮೀರಿ ನನ್ನ ಬಳಿ ವರ್ತಿಸಿದ್ದಿಲ್ಲ. ಕೆ.ಎಮ್. ನಯ್ಯಾರರ ತಂದೆ ಚಿಕ್ಕವರಿದ್ದಾಗಲೇ ಕಮ್ಯುನಿಸಂ ಕಡೆ ಆಕರ್ಷಿತರಾಗಿದ್ದರಿಂದ ಮಗನಿಗೆ ತಾವು ಅತ್ಯಂತವಾಗಿ ಇಷ್ಟಪಡುವ ಕಾರ್ಲ್ ಮಾರ್ಕ್ಸ್‌ರ ಹೆಸರನ್ನು ಇಟ್ಟಿದ್ದರಂತೆ. ಆದರೆ ಕೆ.ಎಮ್. ನಯ್ಯಾರ್ ಮುಂದೆ ರಾಜಕೀಯದಲ್ಲಿ ಬೆಳೆದಂತೆ ಪಕ್ಷವನ್ನು ಬದಲಾಯಿಸಿದರಂತೆ. ಆದರೆ ರಾಜಕಾರಣಿಗಳು ಪಕ್ಷಗಳನ್ನು, ಸಿದ್ಧಾಂತಗಳನ್ನು, ವರ್ತನೆಗಳನ್ನು ಬದಲಾಯಿಸಿದಂತೆ ತಮ್ಮ ತಮ್ಮ ಹೆಸರು, ಜಾತಿ, ಮತ, ಧರ್ಮಗಳನ್ನು ಎಂದಿಗೂ ಬದಲಾಯಿಸಿಕೊಳ್ಳಲಾಗುವುದಿಲ್ಲವಲ್ಲ...' ಎಂದು ರಾಘವರೆಡ್ಡಿ ಕೆ.ಎಮ್. ನಯ್ಯಾರರ ಪರಿಚಯ ಮತ್ತು ಇತಿಹಾಸವನ್ನು ಹೇಳುವಾಗ ನಕ್ಕಿದ್ದ.

ನಾನು ಅರೈವಲ್ ಗೇಟಿನಿಂದ ಹೊರಬಿದ್ದಾಗ ಪ್ರಯಾಣಿಕರಿಗಾಗಿ ಕಾಯುವ ಸಾಲಿನಲ್ಲಿ 'ಕ್ರಾಂತಿ ಕಿರಣ್ ರೆಡ್ಡಿ' ಎಂಬ ನನ್ನ ಹೆಸರಿನ ನೇಮ್ ಪ್ಲೇಟ್ ಹಿಡಿದಿದ್ದ ಯುವತಿಯ ಹತ್ತಿರ ಹೋಗಿ ನಿಂತಿದ್ದೆ. ಸುಮಾರು ಇಪ್ಪತ್ತೇಳು ಇಪ್ಪತ್ತೆಂಟು ವರ್ಷ ವಯಸ್ಸಿರಬಹುದಾದ ಸುಂದರ ಯುವತಿ. ತುಂಬಿಕೊಂಡ ಕೆನ್ನೆಗಳು, ದಟ್ಟವಾದ ಉದ್ದನೆಯ ಕೂದಲು, ಅಗಲವಾದ ಕಣ್ಣುಗಳು. ನನ್ನನ್ನು ಗುರುತು ಹಿಡಿದವಳ ಮುಖದಲ್ಲಿ ನಗುವಿನ ನಯಾಗರ!

'ದೇವರ ನಾಡಿಗೆ ಸ್ವಾಗತ...' ನನ್ನ ಎರಡು ಬ್ಯಾಗುಗಳಲ್ಲಿ ಒಂದನ್ನು ತನ್ನ ಕೈಗೆತ್ತಿಕೊಳ್ಳುತ್ತಾ ಉಲಿದಿದ್ದಳು.

'ದೇವತೆಗಳ ನಾಡು ಕೂಡ...' ನಕ್ಕು ಹೇಳಿದ್ದೆ.

'ಓಹ್! ರಿಯಲಿ ಫೆಂಟಾಸ್ಟಿಕ್. ಪ್ಲೀಸಿಂಗ್ ಗಿಫ್ಟ್, ಥ್ಯಾಂಕ್ಯೂ...' ಎಂದು ಹಣೆಯ ಮೇಲಿನ ಮುಂಗುರುಳ ಮೇಲೆ ಬೆರಳಿಟ್ಟುಕೊಂಡು ಸಣ್ಣದಾಗಿ ನಕ್ಕು ಹೇಳಿದ್ದಳು.

'ಆರ್ ಯು ಸಿಸ್ಟರ್ ಆಫ್ ನಿತ್ಯಾ ಮೆನನ್?' ಎಂದು ಕೆಂಪು ಆಡಿ ಕಾರಿನ ಹಿಂದಿನ ಸೀಟಿನಲ್ಲಿ ಲಗೇಜ್ ಇಡುತ್ತಾ ಕೇಳಿದ್ದೆ. ಅವಳೂ ತನ್ನ ಕೈಲಿದ್ದ ಇನ್ನೊಂದು ಲಗೇಜ್ ಬ್ಯಾಗನ್ನು ಹಿಂದಿನ ಸೀಟಿನಲ್ಲೇ ಇಡುತ್ತಾ ಹಾಗೆ ಬಗ್ಗಿಯೇ ನನ್ನ ಕಡೆ ನೋಡುತ್ತಾ 'ಓಹ್! ನಾಟ್ ಅಟ್ ಆಲ್. ಐಯ್ಯಾಮ್ ಡಾಕ್ಟರ್ ಅರುಂಧತಿ ಪಿಳ್ಳೈ. ಬಟ್ ಜಸ್ಟ್ ಕಾಲ್ ಮೀ ಅರುಂಧತಿ. ಹಾಗೆ ನೋಡಿದರೆ ಕೇರಳದ ಎಪ್ಪತ್ತು ಪರ್ಸೆಂಟ್ ಯುವತಿಯರಲ್ಲಿ ಒಂಥರಾ ಒಂದೇ ರೀತಿ ಕಾಣುವ ಸಾಮಾನ್ಯ ಲಕ್ಷಣಗಳೇ ಇವೆ. ನಿತ್ಯಾ ಮೆನನ್ ನನ್ನ ದೊಡ್ಡಪ್ಪನ ಮಗಳ ಹೈಸ್ಕೂಲ್ ಕ್ಲಾಸ್‌ಮೇಟ್. ಹಿಂದೆ ಒಂದೆರಡು ಸಾರಿ ನಮ್ಮ ಮನೆಗೂ ಬಂದು ವಾರಗಟ್ಟಲೆ ಇದ್ದು ಹೋಗಿದ್ದಾಳೆ. ನಿಮಗೆ ಗೊತ್ತಾ, ಅವಳು ನನಗಿಂತಲೂ ಐದು ಇಂಚು ಕುಳ್ಳಿ. ಈಗ ಬಿಡಿ ತುಂಬಾ ಬಿಜಿಯಾಗಿದ್ದಾಳೆ...' ಎಂದು ಕಾರಿನ ಡ್ರೈವರ್ ಸೀಟಿನಲ್ಲಿ ಕುಳಿತುಕೊಳ್ಳುತ್ತಾ ಹೇಳಿದ್ದಳು. ನಾನು ಅವಳ ಪಕ್ಕದ ಸೀಟಿನಲ್ಲಿ ಕುಳಿತುಕೊಂಡಿದ್ದೆ. ಅವಳು ಜಡೆಗೆ ಸಿಗಿಸಿಕೊಂಡಿದ್ದ ಕೆಂಡಸಂಪಿಗೆಯ ಹೂವಿನ ಪರಿಮಳ ಕಾರನ್ನು ತುಂಬಿಕೊಂಡಿತ್ತು.

'ಎಕ್ಸಲೆಂಟ್' ಪರಿಮಳವನ್ನು ಆಘ್ರಾಣಿಸುತ್ತಾ ಹೇಳಿದ್ದೆ.

'ಏನು..?' ಪ್ರಶ್ನಿಸಿದ್ದಳು ಓರೆನೋಟ ಬೀರಿ.

'ಫ್ರಾಗ್ರೆನ್ಸ್...' ಹೇಳಿದ್ದೆ.

'ಫ್ರಾಗ್ರೆನ್ಸ್, ಆರ್ ಮೀ...?' ನಕ್ಕಿದ್ದಳು.

'ಬೋತ್, ಮಾರ್ವೆಲಸ್ ಅಂಡ್ ಎಕ್ಸಲೆಂಟ್...' ನಾನೂ ನಗುತ್ತಾ ಹೇಳಿದ್ದೆ.

'ಥ್ಯಾಂಕ್ಯೂ, ಹೈದರಾಬಾದಿನಿಂದ ರಾಘವರೆಡ್ಡಿಯವರು ಅಪ್ಪನಿಗೆ ಫೋನ್ ಮಾಡಿದ್ದರಂತೆ. ನಾನು ಮಾಧವನ್ ಪಿಳ್ಳೈಯವರ ಮಗಳು. ಅಪ್ಪ ನನಗೆ ನಿಮ್ಮನ್ನು ಪಿಕಪ್ ಮಾಡಲು ಹೇಳಿದ್ದರಿಂದ ಏನೋ ಕೆಲಸಕ್ಕೆ ಎರ್ನಾಕುಲಂಗೆ ಬಂದಿದ್ದವಳು ಹೀಗೆ ಸೀದಾ ಬಂದುಬಿಟ್ಟೆ'. ಅವಳ ಧ್ವನಿ ಮಾದಕವಾಗಿತ್ತು. ಹೌದು, ಹರೆಯದಲ್ಲಿ, ಎಸ್ಪೆಷಲಿ ಹೆಣ್ಣುಗಳಲ್ಲಿ ದೇಹ ಮತ್ತು ಧ್ವನಿ ಎರಡೂ ಅತ್ಯಂತ ಆಕರ್ಷಕವಾಗಿ ಮೋಹಕವಾಗಿಯೂ ಇರುವುದು ಪ್ರಕೃತಿ ಸಹಜವಾದ ಸಾಮಾನ್ಯ ಸಂಗತಿಯೇ ಸರಿ.

'ನೀವು, ಡಾಕ್ಟರ್...' ನನ್ನ ಮಾತುಗಳಲ್ಲಿದ್ದ ಪ್ರಶ್ನಾರ್ಥಕ ಭಾವವನ್ನು ಗ್ರಹಿಸಿ, 'ನಿಮಗಿಂತಲೂ ತುಂಬಾ ಚಿಕ್ಕವಳು ನಾನು. ಏಕವಚನದಲ್ಲಿಯೇ ಕರೆಯಿರಿ ಪರವಾಗಿಲ್ಲ. ಎಂಬಿಬಿಎಸ್ ಮುಗಿದು, ಒಂದು ವರ್ಷದ ಹೌಸ್ ಸರ್ಜನ್ ತರಬೇತಿ ಕೂಡ ಎರಡು ತಿಂಗಳ ಹಿಂದೆ ಮುಗೀತು. ಎಂ.ಡಿ. ಮಾಡಿ ಮುವಟ್ಟುಪುಜದಲ್ಲೆ ಒಂದು ದೊಡ್ಡ ನರ್ಸಿಂಗ್ ಹೋಂ ಶುರುಮಾಡಿ ರಾಜಕೀಯಕ್ಕೆ ಇಳಿಯ ಬೇಕೆಂಬುದು ಅಪ್ಪನ ಬಯಕೆ. ಆದರೆ ನನಗೆ ಫೋರೆನ್ಸಿಕ್ ಸೈಕಾಲಜಿಯಲ್ಲಿ ತುಂಬಾ ಇಂಟರೆಸ್ಟ್. ಅಮೆರಿಕದಲ್ಲಿ ತುಂಬಾ ಸ್ಕೋಪ್ ಇದೆಯಂತೆ. ಅಮೆರಿಕದ ಬೋಸ್ಟನ್ ಯೂನಿವರ್ಸಿಟಿಯಲ್ಲಿ ಸೀಟು ಕೂಡ ಅಲಾಟ್ ಆಗಿತ್ತು. ಆದರೆ ಅಪ್ಪ ಬಿಲ್ಕುಲ್ ಬೇಡ ಅಂದುಬಿಟ್ರು. ನೋಡೋಣ, ಇನ್ನೂ ಹೋಪ್ ಕಳೆದುಕೊಂಡಿಲ್ಲ. ಹೋಪ್ ಈಸ್ ದಿ ಬೆಸ್ಟ್ ಫ್ರೆಂಡ್ ಆಫ್ ಎನಿ ಹ್ಯೂಮನ್ ಬೀಯಿಂಗ್. ಬೈ ದಿ ಬೈ ನೀವು ತುಂಬಾ ಜೀನಿಯಸ್ ಅಂತೆ ಮತ್ತು ಪ್ರಭಾವಿಯಂತೆ. ಇಂಡಿಯನ್ ಎಕನಾಮಿಕ್ಸ್‌ನಲ್ಲಿ ಪಿಎಚ್.ಡಿ. ಮಾಡಿರುವಿರಂತೆ. ಲಾಜಿಕ್ ಮತ್ತು ಇಂಡಸ್ಟ್ರಿಯಲ್ ಸೈಕಾಲಜಿಯಲ್ಲೂ ಎಕ್ಸ್‌ಪರ್ಟ್ ಅಂತೆ...' ಎಂದು ಒಂದೇ ಉಸಿರಿನಲ್ಲಿ ಹೇಳಿದ್ದಳು, ಕುತೂಹಲದ ಕುಲುಮೆಯಿಂದ ಎದ್ದು